ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಈ ಸಭೆಯಲ್ಲಿ ಯಾವಾಗಲಾದರೂ 1924ನೆಯ ಅಗ್ರಿಮೆಂಟಿಗೆ ಒಪ್ಪಿ ನೀವು ಹೇಳಿರತಕ್ಕ ರೀತಿಯಿಂದ ಆ ರೆಗ್ಯುಲೇಷನ್ ಪ್ರಕಾರವೇ ನಾವು ಮಾಡುತ್ತೇವೆ. ಹೇಮಾವತಿಗೆ ನಮಗೆ ಕ್ಲಿಯರೆನ್ಸ್ ಕೊಡಿ ಎಂದು ಕೇಳಿದ್ದೀರಾ ? ಇದು ಒಂದನೆಯದು. ಎರಡನೆಯದು:—1968ರಲ್ಲಿ ತಾವು ಚರ್ಚೆ ಮಾಡುವ ಕಾಲದಲ್ಲಿ ಲಿಮಿಟ್ ಪ್ಲೋಸ್‌ಗೆ ನೀವು ಒಪ್ಪಿ ರೂಲ್ಸ್ ಆಫ್ ರೆಗ್ಯುಲೇಷನ್ ಬದಲಾವಣೆ ಮಾಡದೆ ಹೇಮಾವತಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮಗೆ ಪರ್ಮಿಷನ್ ಕೊಡಿ ಎಂದು ಕೇಳಿದಿರಾ ? ಮೂರನೆಯದು:—ಲಿಮಿಟ್ ಪ್ಲೋಸ್‌ಗೆ ನೀವು ಒಪ್ಪಿ, ಬದ್ದರಾಗಿ ಹೇಮಾವತಿಯನ್ನು ನಿಮ್ಮ ಇಚ್ಛೆಯಂತೆ 22 ಟಿ.ಎಂ.ಸಿ. ಗನುಗುಣವಾಗಿ ಮಾಡಬೇಕೆಂದು ಇದ್ದರೆ, ಅದನ್ನು ಕಟ್ಟುವುದಕ್ಕೆ ಸಾಧ್ಯವೇ ? ಈ ಮೂರಕ್ಕೂ ಸ್ಪಷ್ಟವಾಗಿ ನಮಗೆ ತಿಳಿಯುವಂತೆ ತಾವು ಉತ್ತರ ಕೊಡಬೇಕೆಂದು ನಮ್ಮ ಕೋರಿಕೆ.

ಶ್ರೀ ವೀರೇಂದ್ರ ಪಾಟೀಲ್.—ಉತ್ತರ ಕೊಡಬಹುದು. ಆದರೆ ಚನ್ನಬಸಪ್ಪನವರಿಗೆ ತಿಳಿಯುವ ಹಾಗೆ ಉತ್ತರ ಕೊಡುವ ಶಕ್ತಿ ನನಗಿಲ್ಲ, ಎಷ್ಟು ವಿವರವಾಗಿ ಉತ್ತರ ಕೊಟ್ಟರೂ ಅವರಿಗೆ ತಿಳಿಯುವ ಹಾಗಿಲ್ಲ, ಅದು ನನಗೆ ಗೊತ್ತಿದೆ. ಈಗ ಒಂದನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ಮಾನ್ಯ ಸಭೆಯಲ್ಲಿ ಅನೇಕ ಸಲ ಭಾಷಣ ಮಾಡಿದ್ದೇನೆ. ಯಾವಾಗ ಏನು ಹೇಳಿದೆ ಎಂಬುದು ಈಗ ಜ್ಞಾಪಕ ವಿಲ್ಲ. ನಾನು ಹೇಳಿರುವುದನ್ನು ಪ್ರೊಸೀಡಿಂಗ್ಸ್‌ನಲ್ಲಿ ನೋಡಬಹುದು. ಎರಡನೆಯದು ಆಗಸ್ಟ್ 1968ರಲ್ಲಿ ಚರ್ಚೆಯಾಗಿರುವುದು—ಅದನ್ನು ಈಗಾಗಲೇ ಹೇಳಿದ್ದೇನೆ. ತಪಸೀಲು ಈಗ ಕೇಳಿದರೆ ನನ್ನ ಬಳಿ ಪ್ರೊಸೀಡಿಂಗ್ಸ್ ಇಲ್ಲ, 1968ರಲ್ಲಿ ಚರ್ಚೆಯಾಗಿರುವುದನ್ನು ಈ ದಿವಸ ಹೇಳುವುದಕ್ಕೆ ಸಾಧ್ಯವಿಲ್ಲ. ಮೂರನೆಯದು ಪ್ಲೋ ಲಿಮಿಟ್ಟಿನ ವಿಚಾರ ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಕ್ರಿಯಾರೋಪವಿದೆ. ಪ್ರಶ್ನೋತ್ತರಗಳ ಕಾಲ ಮುಗಿದಮೇಲೆ ಅದನ್ನು ಕೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮದ್ರಾಸಿನವರು 3-4 ದೊಡ್ಡ ನೀರಾವರಿ ಯೋಜನೆ ಮಾಡಿದಾಗ ನಮ್ಮ ರಾಜ್ಯ ಸರಕಾರದವರನ್ನು ಕೇಳಿಯೆ ಮಾಡಿದ್ದಾರೆ. ಇದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರಕಾರದಲ್ಲಿ ಅಬ್ಜೆಕ್ಷನ್ ಹಾಕಿದ್ದಾರೆಯೇ ? ಹಾಕಿಲ್ಲದಿದ್ದರೆ ಅಗ್ರಿಮೆಂಟಿನೊಳಗೆ ಬಾರದಿರುವುದಿದ್ದರೆ ಏಕೆ ಅಬ್ಜೆಕ್ಷನ್ ಹಾಕಲಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಮದ್ರಾಸಿನವರು ಮುಂದೆ ಮಾಡುವ ಪ್ರಾಜೆಕ್ಟುಗಳ ಬಗ್ಗೆ ಇನ್‌ಫರ್ಮೇಷನ್ ನನ್ನಲ್ಲಿ ಇಲ್ಲ. ಅದನ್ನು ಹೇಳಲು ಸಾಧ್ಯವಿಲ್ಲ.

Land available for distribution to landless peasants

344. Sri M. S. KRISHNAN (Malleswaram).—

Will the Minister for Revenue be pleased to state:—

(*a*) the number of acre of land, belonging to the Government, that is available for distribution to the landless peasants in the State (districtwise figures may be given);

(*b*) the number of acres of land distributed since the last three years to the landless as well as to the agricultural workers (yearwar and districtwise figures may be given);

(*c*) whether it has come to the notice of Government that only a negligible portion of the agricultural workers have been granted land by the Government, if so, the steps the Government intends to take or is taking to see that land is distributed to the landless and in particular the agricultural workers;

(*d*) the machinery that it now constituted by the Government for the joint distribution of land to the landless and the steps that have already been taken in this behalf ?

Sri H. V. KOUJALGI (Minister for Revenue).—

(*a*) and (*b*) *Vide* statments appended.

(*c*) No. The highest priority has been accorded in the allotment of Government land to poor and landless persons and for waiving upset price up to a maximum of Rs. 500 in deserving cases.

(*d*) In order to ensure speedy disposal of land, the Land Grant Rules have been simplified and under the Mysore Land Grant Rules, 1969 a provision has been made for the constitution of a Consultative Committee at Taluk Level consisting of both Official and Non-Official members. These Committees will shortly be set up.

STATEMENT

Showing the extent of waste lands available for disposal in the State.

Sl. No.	District	Extent available
		Acrs. Gs.
1	Belgaum	2,930—13
2	Bijapur	487—12
3	Hassan	46,992—09
4	Tumkur	1,29,434—03
5	Dharwar	2,462—15
6	Raichur	34,829—16
7	Mysore	1,44,255—16½
8	Chitradurga	77,047—23
9	Bellary	52,703—23
10	Kolar	1,27,585—32½
11	Chickmagalur	1,25,490—07
12	Bidar	14,097—23
13	South Kanara	1,70,716—29
14	Mandya	79,610—09
15	Gulbarga	9,120—33
16	Bangalore	30,907—11
17	Coorg	40,714—26
18	Shimoga	94,786—24
19	North Kanara	10,937—22

Total extent available as reported by the Deputy Commissioners of Districts is eleven lakhs ninety-five thousand and nine acres, twenty-seven guntas only. The particulars are only tentative and may include

(SRI H. V. KOUJALGI)

lands unfit for cultivation and reserved lands. The Deputy Commissioners have been requested to check up and confirm the extent of land available for disposal as furnished by them. The Tahsildar of a taluk is required to prepare list of lands available for disposal after reservation of the land as required under the Mysore Land Revenue Act, 1964 (Section 71) and notify the same in the Taluk Office, Village Chavadi and Office of the Village Panchayat as per rule 3 of the Mysore Land Grant Rules, 1969.

STATEMENT

	District	1966–67	1967–68	1968–69
1	Kolar ...	2,207 01	1,454 00	1,888 04
2	Gulbarga ...	2,037 27	857 27	153 19
3	Hassan ...	1,481 28	1,466 29	1,335 36
4	Tumkur ...	2,738 07	1,460 38	1,538 02
5	Chickmagalur ...	2,089 00	1,593 00	1,119 00
6	Mandya ...	3,249 37½	1,712 09	1,438 09
7	Belgaum ...	900 25	735 39	613 00
8	Coorg ...	1,311 17	1,655 13	1,795 51
9	Shimoga ...	1,784 30	2,690 25	1,609 15
10	Chitradurga ...	2,329 13	1,352 35	1,429 30
11	Bellary ...	320 38	394 99	903 85
12	Dharwar ...	236 03	247 02	480 17
13	North Kanara (Karwar)	271 15 0	337 38 6	348 3 10½
14	Bijapur ...	Nil	Nil	107 39
15	Bangalore ...	1,314 04	590 37	921 29
16	Mysore ...	4,194 00	1,914 09	1,649 30
17	South Kanara ...	501 24	1,156 36	1,342 98
18	Raichur ...	46 14	681 10	Nil
19	Bidar ...	...	...	...

ಶ್ರೀ ಎಂ. ಎಸ್. ಕೃಷ್ಣನ್.—(ಸಿ) ಪ್ರಶ್ನೆಗೆ ಉತ್ತರವಾಗಿ ಬಡವರಿಗೆ ಮತ್ತು ಭೂರಹಿತರಿಗೆ ಜಮೀನು ಕೊಡುವುದರಲ್ಲಿ ಆದ್ಯತೆ ನೀಡಲಾಗಿದೆ ಎಂದು ಉತ್ತರವಿದೆ. ಪುಟ 16ರಲ್ಲಿರುವ ಸ್ಟೇಟ್‌ಮೆಂಟ್ ಮತ್ತು ಪುಟ 15ರಲ್ಲಿರುವ ಸ್ಟೇಟ್‌ಮೆಂಟ್ ಕಂಪೇರ್ ಮಾಡಿದರೆ ಕೊಟ್ಟಿರುವ ಉತ್ತರ ವಿರೋಧವಾಗುವುದಿಲ್ಲವೇ? ತುಮಕೂರು ಜಿಲ್ಲೆಯಲ್ಲಿ 1,29,434 ಎಕರೆ 3 ಗುಂಟೆ ಜಮೀನು ವೇಸ್ಟ್‌ಲ್ಯಾಂಡ್ ಇದೆ ಎಂದು 15ನೆ ಪುಟದಲ್ಲಿ ತಿಳಿಸಿ 16ನೇ ಪುಟದಲ್ಲಿ ಸುಮಾರು 5 ಸಾವಿರ ಎಕರೆ ಹಂಚಲಾಗಿದೆ ಎಂದು ತಿಳಿಸಲಾಗಿದೆ. ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆಯಲ್ಲಿ 3 ವರ್ಷಗಳಲ್ಲಿ 5 ಸಾವಿರ ಎಕರೆ ಹಂಚಿದೆ, ಇದೇ ರೀತಿ ಬೇರೆ ಜಿಲ್ಲೆಗಳಲ್ಲೂ ಮಾಡಿದೆ. ಬಿಜಾಪುರ ಜಿಲ್ಲೆಯಲ್ಲಿ 487 ಎಕರೆ ಇರುವುದರಲ್ಲಿ 107 ಎಕರೆ ಹಂಚಲಾಗಿದೆ. ಹೀಗಿರುವುದರಿಂದ ಯಾವರೀತಿ ಹೈಯೆಸ್ಟ್ ಪ್ರಯಾರಿಟಿ ಕೊಟ್ಟಿದೆ ಎಂಬುದನ್ನು ಹೇಳುವಿರಾ?

ಶ್ರೀ ಎಚ್. ವಿ. ಕೌಜಲಗಿ.—ಉತ್ತರದಲ್ಲಿ ಹಂಚಿರುವುದು ಮತ್ತು ಸರಕಾರದಲ್ಲಿರುವುದು ತಿಳಿಸಿದೆ. ಉತ್ತರ ಕೊಟ್ಟಾಗ ಆ ತಾರೀಖಿನಲ್ಲಿ ಎಷ್ಟು ಎಕರೆ ಸರಕಾರದಲ್ಲಿವೆ ಮತ್ತು ಎಷ್ಟು ಹಂಚಿದೆ ಎಂಬುದನ್ನು ತಿಳಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಇರುವುದು ಮತ್ತು ಹಂಚಿರುವುದು ಕೊಟ್ಟಮೇಲೆ ಪ್ರಯಾರಿಟಿ ಕೊಟ್ಟಿದ್ದೇವೆಂದು ಹೇಳುವುದು ವಿರೋಧಾಭಾಸ ವಾಗುವುದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲ.

Sri J. P. SARWESH.—The Hon.Minister must be aware that I sent several telegrams complaining against the Deputy Commissioner that instead of granting lands to the persons who are already in possession of *giron* lands since a number of years, he is attaching the standing crops on their lands. In Bidar District, in 1966-67 nothing is granted; in 1967–68 also nothing is granted; in 1968-69 also no land is granted. The same is the case in Raichur in 1968–69. Why no land is distributed to the landless by the Deputy Commissioners in Bidar, Raichur and Gulbarga Districts ?

Sri H. V. KOUJALGI.—The hon. Member knows that till today there was no provision to confirm the land to the person who has occupied it unauthorisedly. It is only recently that we have amended Section 94 of Land Revenue Act and rules thereunder will have to be framed. According to the existing provisions, if anybody has encroached *giron* land and if it is unauthorised, he will have to be necessarily evicted.

ಶ್ರೀ ಎಸ್. ಬಂಗಾರಪ್ಪ—ಕೊನೆಯ ಪ್ರಶ್ನೆಗೆ ಜವಾಬನ್ನು ಹಂಚಲು ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ಉತ್ತರ ಕೊಡಲಾಗಿದೆ. ಆ ಸಮಿತಿಯಲ್ಲಿ ಅಧಿಕಾರಿಗಳಿರುವುದರಿಂದ ಇತರ ಪ್ರತಿನಿಧಿಗಳ ಮಾತಿಗೆ ಬೆಲೆ ಇರುವುದಿಲ್ಲ. ಇದು ಬರೀ ಅಸ್ಯೈಜರಿ ಬಾಡಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. V. KOUJALGI.—As the rules stand today, it is an advisory body. The advice given by the Committee will be generally accepted.

ಶ್ರೀ ವಿ. ಎನ್. ಪಾಟೀಲ್.—ಭೂಸುಧಾರಣೆ ಜಾರಿಗೆ ತರುವಾಗ ಜವಾನು ಕೊಡುವಾಗ ಉತ್ತೇಜನ ಕೊಡಬೇಡವೇ ? 5 10 ಎಕರೆ ಇರುವವರಿಗೆ ಅಥವ ಇನ್ನೂ ಕಡಮೆ ಇರುವವರಿಗೆ ಉಚಿತವಾಗಿ ಜಮೀನು ಕೊಡುವುದು ಯುಕ್ತವಲ್ಲವೇ ?

Sri H. V. KOUJALGI.—We will have to make a distinction between a law-abiding person and a man who commits breach of law. The person who is law-abiding will, of course, have to be shown concession.

Sri V. N. PATIL.—The person who has occupied the land and tilled it, has helped the Government in increasing food production. He has met the needs of the nation. Should not the Government appreciate his efforts to grow more food and grant the lands under his occupation to him in a sportive spirit ?

(*No answers*)

Sri S. BANGARAPPA.—It is not those persons who have occupied the land that have committed breach of trust. On the other hand, it is the Government that is guilty of breach of trust and breach of law because they did not grant land to landless people.

Sri H. V. KOUJALGI.—I cannot answer the question raised by my hon. friend. If my friend Sri Bangarappa has got anything concrete, he can make out his case in any other form.

ಶ್ರೀ ಎ. ಎನ್. ಪಾಟೀಲ್.—ನನ್ನ ಪ್ರಶ್ನೆಗೆ ಪೂರ್ಣವಾಗಿ ಉತ್ತರ ಕೊಡಲಿಲ್ಲ.

1-30 P.M.

Sri H. V. KOUJALGI.—In the case of encorachers it is double the price. But, that is the maximum that can be levied.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಭೂಮಿಯನ್ನು ಹಂಚುವುದಕ್ಕೋಸ್ಕರವಾಗಿ ತಾಲ್ಲೂಕು ಮಟ್ಟದಲ್ಲಿ ಸಲಹಾ ಸಮಿತಿಗಳನ್ನು ಮಾಡುತ್ತಿರುವುದಾಗಿ ಹೇಳಿದ್ದಾರೆ. ಹಾಸನ, ಅರಕಲಗೂಡು ಸಕಲೇಶಪುರ, ಆಲೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಅಂದರೆ ಹೇಮಾವತಿ ಪ್ರದೇಶಗಳಲ್ಲಿ ಮುಳುಗಡೆಯಾಗುವ ಜಮೀನಿನ ರೈತರಿಗೆ ಜಮೀನು ಕೊಡುವುದಕ್ಕೋಸ್ಕರ ರೀಹ್ಯಾಬಿಲಿಟೇಷನ್ ಕಮಿಟಿಗಳನ್ನು ಮಾಡಿ ಅಲ್ಲಿರುವಂಥ ಎಲ್ಲ ಜಮೀನುಗಳನ್ನೂ ಹಾಗೆಯೇ ಇಡಬೇಕು, ಇತರರಿಗೆ ಕೊಡಬಾರದು ಎಂದು ಆರ್ಡರ್ ಕೂಡ ಮಾಡಿದ್ದಾರೆ. ಈಗ ಸಲಹಾ ಸಮಿತಿಗಳನ್ನು ಮಾಡುವುದಾದರೆ ಆ ಕಮಿಟಿಗಳಿಗೆ ಏನು ಕೆಲಸವಿರುತ್ತದೆ? ಎಲ್ಲ ಜಮೀನನ್ನೂ ಇಟ್ಟುಕೊಂಡಿರಬೇಕೇ ಅಥವಾ ಕಮಿಟಿಗಳು ಹಂಚಬೇಕೆ? ಏನು ಅಧಿಕಾರವಿರುತ್ತದೆ?

Sri H. V. KOUJALGI.—That reservation order was passed before these rules were framed. I have received some representations stating that all the area should not be reserved and some land should be released for poor people. I am waiting for the recommendation of the Rehabilitation Committee. If they recommend it will be taken into consideration.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಸಲಹಾ ಸಮಿತಿಗಳನ್ನು ಮಾಡುವುದಾದರೆ, ರೀ ಹ್ಯಾಬಿಲಿ ಟೇಷನ್ ಕಮಿಟಿಯವರ ಅಪ್ರೈ ತ್ಸ್ ಅಥವಾ ಡೈರೆಕ್ಷನ್ ಪ್ರಕಾರ ಕೆಲಸ ಮಾಡಬೇಕೇ?

Sri H. V. KOUJALGI.—The question is this: The rehabilitation committee says that all the lands need not be reserved and that they are going to recommend that some of the lands will be released. So, whatever is released will be given.

ಶ್ರೀ ಎಂ. ನಾಗಪ್ಪ.—15ನೇ ಪುಟದಲ್ಲಿ ಎಷ್ಟೆಷ್ಟು ಎಕರೆ ಜಮೀನಿದೆ ಎನ್ನುವ ಅಂಕಿ ಅಂಶ ಗಳನ್ನು ಕೊಡಲಾಗಿದೆ. ಯಾವ ತಾರೀಖಿನವರೆಗೆ ಅಥವಾ ಯಾವ ತಾರೀಖಿನಿಂದ ತೆಗೆದುಕೊಳ್ಳ ಲಾಗಿದೆ? ರಾಯಚೂರು ಜಿಲ್ಲೆಯಮಟ್ಟಿಗೆ ಹೇಳುವುದಾದರೆ ಉತ್ತರದಲ್ಲಿ 34,829 ಎಕರೆ 16 ಗುಂಟೆ ಎಂದು ಇದೆ. ಇದು ಸರಿಯಾದುದಲ್ಲ, ಇದಕ್ಕಿಂತ ಹಿಂದೆ ಅನೇಕ ಸಲ ಕೆಲವು ಸರ್ಕಾರಿ ಜಮೀನುಗಳನ್ನು ಅನೇಕ ಜನರಿಗೆ ಪಟ್ಟಾಮಾಡಿ ಕೊಟ್ಟಿದ್ದಾರೆ. ಆದ್ದರಿಂದ ಸರಿಯಾದ ಲೆಕ್ಕವನ್ನು ತೆಗೆದುಕೊಂಡು ಹಂಚಲು ಪ್ರಯತ್ನ ಮಾಡುತ್ತಾರೆಯೇ?

Sri H. V. KOUJALGI.—These figurse are obtained in the year 1969. I do not say that these figures are correct. This is after all a rough estimate.

Sri G. CHANDRAKANT.—May I know whether Consultative Committees at Taluk Level have been constituted and whether they have met anywhere in the State so far and allotted lands to the landless people?

Sri H. V. KOUJALGI.—The committee has not yet been formed and it will be formed very shortly.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಸಲಹಾ ಸಮಿತಿಗಳಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರರು ಯಾರು ಇರುತ್ತಾರೆ ಮತ್ತು ಒಟ್ಟು ಎಷ್ಟು ಜನರಿರುತ್ತಾರೆ?

Sri H. V. KOUJALGI.—I have already stated that so far as non-officials are concerned, they are, the M.L.A. of the Taluk, the President of taluk Board and one Harijan and M.L.C. So far as officials are concerned they are, Tahsildar, Forest Officer and some from the Survey Department and P. W. Department, just to help them.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಕೊಟ್ಟಿರುವ ಅಂಕಿ ಅಂಶಗಳಲ್ಲಿ ಎನ್‌ಕ್ರೋಚ್ ಆಗಿರುವುದನ್ನು ಸೇರಿಸಲಾಗಿದೆಯೇ ಅಥವಾ ಇಲ್ಲವೇ? ಎನ್‌ಕ್ರೋಚ್ ಮಾಡಿದ್ದಾರೆಂದು ಹೇಳುತ್ತಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅವರಿಗೇ ಜಮೀನನ್ನು ಕೊಡಬೇಕೆಂದು ಕಮಿಟಿಯನ್ನು ಮಾಡಿಕೊಂಡಿದ್ದಾರೆ. ಜಾಸ್ತಿ ಜಮೀನು ಇರುವವರು ಎನ್‌ಕ್ರೋಚ್ ಮಾಡಿರುತ್ತಾರೆ ಬಡವರಿಗೆ ಜಮೀನು ಸಿಕ್ಕುವುದಿಲ್ಲವೆನ್ನುವುದನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಜಮೀನು ಇದೆ, ಯಾರು ಇದಕ್ಕೆ ಅರ್ಹರು ಎಂದು ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಕೊಟ್ಟ ಅಂಕಿ ಸಂಖ್ಯೆಯಲ್ಲಿ ಎನ್‌ಕ್ರೋಚ್ ಆಗಿರುವ ಜಮೀನುಗಳ ಲೆಕ್ಕವೂ ಸಮಾವೇಶವಾಗಿದೆ. ಅಜಮಾಯಿಷಿಯಂತೆ 2 ಲಕ್ಷ ಎಕರೆ ಎನ್‌ಕ್ರೋಚ್ ಆದಂಥ ಭೂಮಿ ಇದೆ. ಯಾರಾದರೂ ಬಡವರು ಇದ್ದರೆ ಅವರಿಗೇ ಕೊಡಬೇಕು ಎಂದು ಮಸೂದೆಯ 94ನೇ ವಿಧಿ ಜಾರ್ಜಿಯಾಗುವ ಕಾಲದಲ್ಲಿ ಹೇಳಲಾಗಿದೆ. ಅದಕ್ಕೆ ಸಂಬಂಧಪಟ್ಟ ರೂಲ್ಸ್ ಮಾಡಲಾಗುತ್ತಿದೆ. ಅದನ್ನು ಮಾಡಿ ಕೂಡಲೇ ಸಭೆಯ ಮುಂದೆ ಇಡುತ್ತೇವೆ. ಆ ಕಾಲಕ್ಕೆ ಮಾನ್ಯ ಸದಸ್ಯರ ಸೂಚನೆಗಳನ್ನು ಗಮನದಲ್ಲಿ ತೆಗೆದುಕೊಳ್ಳುತ್ತೇವೆ.

Sri BAPU GOWDA.—Some areas come under the atchkat area of Krishna Project. The Government have issued a notification stating that no lands should be distributed to the landless. In view of that fact, what will be the work for these committees ?

Sri H. V. KOUJALGI.—Of course for persons who are affected on account of projects, some lands will have to be reserved and provision is made in the Land Grant Bules. After the lands are reserved, the excess area will be allowed to be distributed by the committee.

ಶ್ರೀ ಎನ್. ಎ. ಚನ್ನೇಗೌಡ.—ಎಷ್ಟೆಷ್ಟು ಜಮೀನು ಹಂಚುವುದಕ್ಕೆ ಇದೆ ಎನ್ನುವುದನ್ನು ತಹಸೀಲ್ದಾರರು ಅನೌನ್ಸ್ ಮಾಡಬೇಕು ಎಂದು ಇದೆ. ಎಲ್ಲಾ ತಹಸೀಲ್ದಾರರೂ ಈ ರೀತಿ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ವೆರಿಫೈ ಮಾಡಲಾಗಿದೆಯೇ ? ಮಂಡ್ಯ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಸುಮಾರು 66 ಎಕರೆ ಜಮೀನನ್ನು ಹಂಚಿದ್ದಾರೆ. ಇದರಲ್ಲಿ ಎಷ್ಟು ಜನ ಭೂಹೀನರಿಗೆ ಕೊಟ್ಟಿದ್ದಾರೆ, ಇತರೆಯವರಿಗೆ ಎಷ್ಟು ಕೊಟ್ಟಿದ್ದಾರೆ, ಸರ್ಕಾರದಿಂದ ಜಮೀನು ಪಡೆದು ಮಾರಿಕೊಳ್ಳುವವರಿಗೆ ವ್ಯಾಪಾರಗಾರರಿಗೆ ಎಷ್ಟು ಜನರಿಗೆ ಕೊಟ್ಟಿದ್ದಾರೆ ?

ಶ್ರೀ ಎಚ್. ವಿ. ಕೌಜಲಗಿ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಬಡವರಿಗೆ ಎಷ್ಟು ಕೊಟ್ಟಿದೆ, ವ್ಯಾಪಾರ ಮಾಡುವವರಿಗೆ ಎಷ್ಟು ಕೊಟ್ಟಿದೆ ಎನ್ನುವ ವಿವರಗಳನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವು ಇದರೊಳಗೆ ಬರುವುದಿಲ್ಲ.

Smt. WINNIFRED F. FERNANDES.—Has it come to the notice of the Government that there are hundreds of applications pending with the Tahsildars concerned for more than two to three years on the plea that they cannot be disposed of unless the Consultative Committee is formed at the Taluk level ?

Sri H. V. KOUJALGI.—When the Government took decision to constitute taluk committees, I have issued instructions that no land should be distributed so that the Committee can distribute the land.

ಶ್ರೀ ಬಿ. ದೊಡ್ಡಬೋರೇಗೌಡ.—ಕಳೆದ ಮೂರು ವರ್ಷಗಳಲ್ಲಿ ಸುಮಾರು ನಾಲ್ಕೂವರೆಯಿಂದ ಐದು ಸಾವಿರ ಎಕರೆ ಜಮೀನನ್ನು ಮಂಡ್ಯ ಜಿಲ್ಲೆಯಲ್ಲಿ ಹಂಚಿದೆ ಎಂದು ಉತ್ತರದಲ್ಲಿ ಕೊಟ್ಟಿದೆ. ಆದರೆ ನಿಮ್ಮ ಪಾರ್ಟಿಯ ಸ್ಥಳೀಯ ಮುಖಂಡರ ಆದೇಶವ ಮೇರೆಗೆ ರಿಕಾರ್ಡಿನಲ್ಲಿ ಬಡವರಿಗೆ ಸಾಗುವಳಿ ಚೀಟಿ ಕೊಡಿಸಿ ಆ ನಂತರ ಭೂಮಿ ಕ್ರಯ ಆಗಿದ್ದು ಅದನ್ನು ತಡೆಯುವುದಕ್ಕೆ ಆಜ್ಞೆ ಮಾಡುತ್ತೀರಾ ?

ಉಪಾಧ್ಯಕ್ಷರು.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಈ ನಾರಾಯಣಗೌಡ.—ಪೆಡ್ಯೂಲ್ಡ್ ಕಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಜಮೀನು ಉಚಿತವಾಗಿ ಕೊಡುತ್ತಿದ್ದರು. ಈಗ ಕಮ್ಮತ್ತು ಹೆಚ್ಚು ಮಾಡಿರುವುದರಿಂದ ಜಮೀನು ಕೊಟ್ಟರೂ ಅದನ್ನು ಪಡೆಯುಕ್ಕಂಥ ಶಕ್ತಿ ಬಡ ಜನರಲ್ಲಿ ಇಲ್ಲ. ಆದುದರಿಂದ ಕಿಮ್ಮತ್ತು ಕಡಿಮೆ ನಿಗದಿ ಮಾಡಲು ತಾಲ್ಲೂಕು ಸಮಿತಿಗೆ ಸೇರಿಸುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ತಾಲ್ಲೂಕು ಸಮಿತಿಯು ತನ್ನ ಅಭಿಪ್ರಾಯವನ್ನು ತಹಶೀಲ್ದಾರರಿಗೆ ಹೇಳಬಹುದು.

Sri M. RAMAPPA.—Is the Government aware that there is inordinate and unnecessary delay in constituting this Committee and the land grant has come almost to a standstill for the last so many years on account of this delay?

Sri H. V. KOUJALGI.—The delay is not for a number of years. The Government took a decision to form the Committee and the names of the Committee were about to be announced. Since the members of the Legislative Council made a representation that they should also be included in the Committee, the Government took a decision to include them also. The names of the members of the Committee will be announced shortly.

ಶ್ರೀ ಬೊಳಾ ರಘುರಾಮಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಕುಮಕಿ ಲ್ಯಾಂಡ್ಸ್ ಎಸ್ಟ್ರೀಣ್ ಎಷ್ಟು?

Sri H. V. KOUJALGI.—Kumki lands are not included in this.

Sri D. B. KALMANKAR.—In Bidar District, there are 14,000 acres available for distribution. But so for not a single acre has been distributed in Bidar District. May I know what are the reasons for this?

Sri H. V. KOUJALGI.—Some lands have been distributed there also. I have not got the information an land.

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ 23 ವರ್ಷಗಳಲ್ಲಿ ಈ ಜಮೀನು ಹಂಚಿಲ್ಲ. ಈ ಜಮೀನು ಹಂಚುವುದಕ್ಕೆ ಇನ್ನೂ ಎಷ್ಟು ವರ್ಷ ಈ ಕಾಂಗ್ರೆಸ್ ಸರಕಾರಕ್ಕೆ ಬೇಕು? ಕನ್ಸ್‌ಲ್ಟೇಟಿವ್ ಕಮಿಟಿಯಲ್ಲಿ ಎಂ.ಎಲ್.ಎ., ಎಂ.ಎಲ್.ಸಿ. ಟಿ.ಡಿ.ಬಿ. ಪ್ರೆಸಿಡೆಂಟ್, ಹರಿಜನ ಮೆಂಬರ ಇರುವುದಲ್ಲದೆ ಕೇರಳ ಮತ್ತು ಪಶ್ಚಿಮ ಬಂಗಾಳನಲ್ಲಿ ಇರುವ ಹಾಗೆ ಎಲ್ಲ ರಾಜಕೀಯ ಪಕ್ಷಗಳನ್ನೊಳಗೊಂಡು ಯಾವ ಒತ್ತಡ ಇಲ್ಲದೆ ಹಂಚುವ ಹಾಗೆ ಮಾಡುತ್ತೀರಾ?

Sri H V. KOUJALGI.—So far as the distribution of lands is concerned, it will be distributed as early as possible. Now the committee will be there and everything will be in their hands. Till now the officers were distributing the lands. The Chief Minister has also said that the lands will be distributed within 2 years. I do not agree with the suggestion that the matter of distribution of lands should be entrusted to non-political parties. It will then become an unwiedly body.

ಶ್ರೀ ಎಮ್. ಎಚ್. ಜಯಪ್ರಕಾಶ ನಾರಾಯಣ.—ಅರಣ್ಯ ಇಲಾಖೆಯಿಂದ ಜಮೀನು ರಿಲೀಜ ಮಾಡಿ ಕಲ್ಪವೇಶನ್ನಿಗೆ ಒದಗಿಸಿಕೊಡಬೇಕು ಎಂದು ಇರುವ ಸರಕಾರಿ ಆರ್ಡರ್ ಜಾರಿಗೆ ತರಲಿಲ್ಲವೇ?

Sri H. V. KOUJALGI.—That forest area is not included in this.